ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 21-01-1980.

# *ತಂದೆಯನ್ನು ಪ್ರತ್ಯಕ್ಷ ಮಾಡುವ ವಿಧಿ.*

(बाप को प्रत्यक्ष करने की विधि)

ಇಂದು ಬಾಪ್‌ದಾದಾರವರು ಪರಮಾತ್ಮನ ಜ್ಞಾನದ ಪ್ರತ್ಯಕ್ಷಸ್ವರೂಪ ಅರ್ಥಾತ್ ಪ್ರತ್ಯಕ್ಷದಲ್ಲಿ ಡಬಲ್‌ರೂಪದ ಮಕ್ಕಳನ್ನು ನೋಡುತ್ತಿದ್ದಾರೆ. 1.ಮಾಯಾಪ್ರೂಫ್. 2.ಶ್ರೇಷ್ಠಜೀವನದ ಅಥವಾ ಬ್ರಾಹ್ಮಣ ಜೀವನದ, ಸರ್ವಶ್ರೇಷ್ಠವಾದ ತಮ್ಮ ಅಲೌಕಿಕ ಜೀವನ, ಈಶ್ವರೀಯ ಜೀವನದ ಪ್ರೂಫ್(ರುಜು), ಶ್ರೇಷ್ಠಜ್ಞಾನದ ಪ್ರೂಫ್ ಆಗಿದೆ- 'ಶ್ರೇಷ್ಠಜೀವನ'. ಇಂತಹ ಡಬಲ್ ಪ್ರೂಫ್ ಮಕ್ಕಳನ್ನು ನೋಡುತ್ತಿದ್ದಾರೆ. ತಮ್ಮನ್ನು ಸದಾ ಪರಮಾತ್ಮ-ಜ್ಞಾನದ ಪ್ರತ್ಯಕ್ಷಪ್ರಮಾಣ ಅಥವಾ ಪ್ರೂಫ್ ಎಂದು ತಿಳಿಯುವುದರಿಂದ, ಸದಾ ಮಾಯಾಪ್ರೂಫ್ ಆಗಿರುತ್ತೀರಿ. ಒಂದುವೇಳೆ ಪ್ರತ್ಯಕ್ಷಪ್ರಮಾಣದಲ್ಲಿ ಯಾವುದೇ ಬಲಹೀನತೆ ಇದ್ದರೆ, ಪರಮಾತ್ಮ-ಜ್ಞಾನದ ಯಾವ ಚಾಲೆಂಜ್ ಮಾಡುತ್ತೀರೋ ಅದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ವರ್ತಮಾನದಲ್ಲಿ ವಿಜ್ಞಾನದ ಯುಗದಲ್ಲಿ ಪ್ರತಿಯೊಂದು ಮಾತಿನ ಪ್ರತ್ಯಕ್ಷಪ್ರಮಾಣ ಅಥವಾ ಪ್ರೂಫ್ ನ ಮೂಲಕವೇ ತಿಳಿಯಬಯಸುತ್ತಾರೆ. ಕೇಳುವುದು-ಹೇಳುವುದರಿಂದ ನಿಶ್ಚಯವನ್ನು ಇಡುವುದಿಲ್ಲ. ಪರಮಾತ್ಮ ಜ್ಞಾನವನ್ನು ನಿಶ್ಚಯ ಮಾಡುವುದಕ್ಕಾಗಿ ಪ್ರತ್ಯಕ್ಷಪ್ರಮಾಣವನ್ನು ನೋಡಲು ಬಯಸುತ್ತಾರೆ. ಪ್ರತ್ಯಕ್ಷಪ್ರಮಾಣವಾಗಿದೆ ತಮ್ಮೆಲ್ಲರ ಜೀವನ, ಜೀವನದಲ್ಲಿಯೂ ಇದೇ ವಿಶೇಷತೆ ಕಂಡುಬರಬೇಕು- ಯಾರು ಇಂದಿನವರೆಗೂ ಯಾವುದೇ ಆತ್ಮಜ್ಞಾನಿ, ಮಹಾನ್ ಆತ್ಮರೂ ಮಾಡಲು ಸಾಧ್ಯವಾಗಿರಬಾರದು. ಇಂತಹ ಅಸಂಭವದಿಂದ ಸಂಭವವಾಗುವಂತಹ ವಿಷಯಗಳೇ ಪರಮಾತ್ಮನ ಜ್ಞಾನದ ಪ್ರತ್ಯಕ್ಷಪ್ರಮಾಣವಾಗಿದೆ. ಎಲ್ಲದಕ್ಕಿಂತ ದೊಡ್ಡ ಅಸಂಭವವು ಸಂಭವವನ್ನಾಗಿ ಮಾಡುವ ಮಾತಾಗಿದೆ- 'ಪ್ರವೃತ್ತಿಯಲ್ಲಿರುತ್ತಾ ಪರ-ವೃತ್ತಿಯಲ್ಲಿರುವುದು'. ಪ್ರವೃತ್ತಿಯಲ್ಲಿರುತ್ತಾ ಈ ದೇಹ ಮತ್ತು ದೇಹದ ಪ್ರಪಂಚದ ಸಂಬಂಧಗಳಿಂದ ಅತೀತವಿರುವುದು. ಹಳೆಯ ವೃತ್ತಿಯಿಂದ ಪರ-ವಿರುವುದು ಅರ್ಥಾತ್ ಅತೀತವಾಗಿರುವುದು. ಇದನ್ನೇ ಪರ-ವೃತ್ತಿಯೆಂದು ಹೇಳಲಾಗುತ್ತದೆ ಪ್ರವೃತ್ತಿಯಲ್ಲ ಆದರೆ ಪರ-ವೃತ್ತಿಯಾಗಿದೆ. ನೋಡುವುದು ದೇಹವನ್ನಾಗಿದೆ ಆದರೆ ವೃತ್ತಿಯಲ್ಲಿ ಆತ್ಮದ ರೂಪವಿದೆ. ಸಂಪರ್ಕದಲ್ಲಿ, ಲೌಕಿಕಸಂಬಂಧದಲ್ಲಿ ಬರುತ್ತಿದ್ದರೂ ಸಹೋದರಿ-ಸಹೋದರನ ಸಂಬಂಧದಲ್ಲಿ ಇರುವುದು. ಈ ಹಳೆಯ ಶರೀರದ ಕಣ್ಣುಗಳಿಂದ ಹಳೆಯಪ್ರಪಂಚದ ವಸ್ತುಗಳನ್ನು ನೋಡುತ್ತಾ, ನೋಡದಂತಿರುವುದು. ಈ ರೀತಿ ಪ್ರವೃತ್ತಿಯಲ್ಲಿರುವವರು ಅರ್ಥಾತ್ ಸಂಪೂರ್ಣ ಪವಿತ್ರ ಜೀವನದಲ್ಲಿ ನಡೆಯುವವರಿಗೆ ಹೇಳಲಾಗುತ್ತದೆ 'ಪರಮಾತ್ಮ ಜ್ಞಾನದ ಪ್ರೂಫ್'. ಮಹಾನ್ ಆತ್ಮರೂ ಸಹ ಅಸಂಭವವೆಂದು ಹೇಳುವದನ್ನು ತಾವು ಸಹಜ ಎಂದು ಹೇಳುತ್ತೀರಿ, ಕೇವಲ ಹೇಳುವುದಿಲ್ಲ ಆದರೆ ಪ್ರಪಂಚದ ಮುಂದೆ ಮಾಡಿತೋರಿಸುತ್ತೀರಿ. ಈಗಿನವರೆಗೂ ಭಕ್ತಮಾಲೆಯಲ್ಲಿ ಮೊದಲ, ಎರಡನೆಯ ಮಣಿಯೂ ಸಹ ಪರಮಾತ್ಮನ ಮಿಲನವನ್ನು ಬಹಳ ಕಷ್ಟ, ಬಹಳಜನ್ಮಗಳಾದ ನಂತರವೇ ಸಿಗುತ್ತದೆ ಅಥವಾ ಸಿಗುತ್ತದೆ ಎನ್ನುವುದೂ ನಿಶ್ಚಿತವಿಲ್ಲವೆಂದು ತಿಳಿಯುತ್ತಾರೆ. ಒಂದು ಸೆಕೆಂಡಿನ ಸಾಕ್ಷಾತ್ಕಾರವನ್ನು ಮಹಾನ್ ಪ್ರಾಪ್ತಿ ಎಂದು ತಿಳಿಯುತ್ತಾರೆ. ಸಾಕ್ಷಾತ್ ತಂದೆಯು ತಮ್ಮವರಾಗಿಬಿಡುವುದು ಅಥವಾ ತಮ್ಮವರನ್ನಾಗಿ ಮಾಡಿಕೊಳ್ಳುವುದು- ಇದನ್ನು ಅಸಂಭವವೆಂದು ತಿಳಿಯುತ್ತಾರೆ. ಅದು ಬಹಳ ಉದ್ದವಾದ ಖರ್ಜೂರದ ಗಿಡವೆಂದು ಹೇಳಿ ಬಲಹೀನರಾಗಿ ಬಿಡುತ್ತಾರೆ. ಮತ್ತು ತಾವೆಲ್ಲರೂ ಉದ್ದವಾದ ಖರ್ಜೂರಕ್ಕೆ ಬದಲಾಗಿ, ಮನೆಯಲ್ಲಿ ಕುಳಿತಿದ್ದಂತೆಯೇ ಕಲ್ಪ-ಕಲ್ಪದ ಅಧಿಕಾರವನ್ನು ಅನುಭವ ಮಾಡುತ್ತೀರಿ. ಮಿಲನ ಮಾಡುವುದನ್ನು ಅವರು ಕಷ್ಟವೆಂದು ತಿಳಿಯುತ್ತಾರೆ ಮತ್ತು ತಾವು ಮಿಲನವನ್ನು ಅಧಿಕಾರವೆಂದು ತಿಳಿಯುತ್ತೀರಿ. ಅಧಿಕಾರಿ ಜೀವನ ಅರ್ಥಾತ್ ತಂದೆಯ ಸರ್ವಖಜಾನೆಗಳಿಂದ ಸಂಪನ್ನವಾದ ಜೀವನವಾಗಿದೆ. ಈ ಪ್ರತ್ಯಕ್ಷದಲ್ಲಿನ ಅನುಭವೀ ಜೀವನವೂ ಸಹ ವಿಶೇಷವಾಗಿ ಪರಮಾತ್ಮ-ಜ್ಞಾನದ ಪ್ರಮಾಣ ಅರ್ಥಾತ್ ಪ್ರೂಫ್ ಆಗಿದೆ. ಪರಮಾತ್ಮ ಎಂದು ಹೇಳುವುದು ಅರ್ಥಾತ್ ಬಾಬಾ ಎಂದು ಹೇಳುವುದಾಗಿದೆ. ತಂದೆಯ ಸಂಬಂಧದ ಪ್ರೂಫ್ ವಾರಸತ್ವವಾಗಿದೆ(ಆಸ್ತಿ).

ಆತ್ಮಜ್ಞಾನಿಗಳು ಅಥವಾ ಮಹಾನ್ ಆತ್ಮರೊಂದಿಗಿರುವುದು ಸಹೋದರಿ-ಸಹೋದರನ ಸಂಬಂಧವಾಗಿದೆ, ತಂದೆಯಲ್ಲ ಆದ್ದರಿಂದ ವಾರಸತ್ವ ಬರುವುದಿಲ್ಲ. ಆತ್ಮಜ್ಞಾನಿ ಅಥವಾ ಮಹಾನ್ ಆತ್ಮರು ಸಹೋದರ-ಸಹೋದರನಾಗಿದ್ದಾರೆ, ಪರಮಾತ್ಮ ಅಥವಾ ತಂದೆಯಲ್ಲ. ಆದ್ದರಿಂದ ಅವಿನಾಶಿ ಆಸ್ತಿಯ ಬಯಕೆಯಿದ್ದರೂ ಅನುಭವ ಮಾಡಲು ಸಾಧ್ಯವಾಗುತ್ತಿಲ್ಲ. ಪರಮಾತ್ಮ ಜ್ಞಾನದ ಸಹಜಪ್ರಮಾಣವು ಜೀವನದಲ್ಲಿ ವಾರಸತ್ವದ ಪ್ರಾಪ್ತಿಯಾಗಿದೆ. ಈ ಅವಿನಾಶಿ ಜ್ಞಾನ, ಪ್ರಾಪ್ತಿಯ ಪ್ರಮಾಣವು ಜೀವನದಲ್ಲಿ ವಾರಸತ್ವದ ಪ್ರಾಪ್ತಿಯಾಗಿದೆ. ಇದು ಪರಮಾತ್ಮನನ್ನು ಪ್ರತ್ಯಕ್ಷ ಮಾಡಲು ಸಾಧ್ಯವಾಗುತ್ತದೆ. ಅಂದಮೇಲೆ ಇದು ವಿಶೇಷವಾದ ಪ್ರಮಾಣವಾಯಿತು.

**ಕೇವಲ ಪುರುಷಾರ್ಥಿ ಎನ್ನುವುದರ ಅರ್ಥ ಪ್ರಾಪ್ತಿಯಿಂದ ವಂಚಿತರಾಗುವುದು.**

ತಂದೆಯ ಪ್ರತ್ಯಕ್ಷ ಮಾಡುವುದು- ಹೊಸವರ್ಷದ ಈ ಧೃಡಸಂಕಲ್ಪವನ್ನು ತೆಗೆದುಕೊಂಡಿದ್ದೀರಾ? ಎಲ್ಲರೂ ಸಂಕಲ್ಪವನ್ನು ತೆಗೆದುಕೊಂಡಿದ್ದೀರಲ್ಲವೆ. ಅಂದಮೇಲೆ ಪ್ರತ್ಯಕ್ಷ ಮಾಡುವ ಸಾಧನವಾಗಿದೆ. ಡಬಲ್ ಪ್ರೂಫ್ ಆಗುವುದು. ಪರಿಶೀಲನೆ ಮಾಡಿಕೊಳ್ಳಿರಿ- ಈ ಪ್ರತ್ಯಕ್ಷಪ್ರಮಾಣ `ಪವಿತ್ರತೆ ಮತ್ತು ಪ್ರಾಪ್ತಿ' ಎರಡೂ ಅವಿನಾಶಿಯಾಗಿದೆ! ಅಲ್ಪಜ್ಞ ಆತ್ಮರು ಅಲ್ಪಕಾಲದ ಪ್ರಾಪ್ತಿಯನ್ನು ಮಾಡಿಸುತ್ತಾರೆ. ಅವಿನಾಶಿ ತಂದೆಯು 'ಅವಿನಾಶಿ' ಪ್ರಾಪ್ತಿಯನ್ನು ಮಾಡಿಸುತ್ತಾರೆ. ಪರಮಾತ್ಮ ಮಿಲನ ಅಥವಾ ಪರಮಾತ್ಮ ಜ್ಞಾನದ ವಿಶೇಷತೆಯೇ ಅವಿನಾಶಿಯಾಗಿದೆ. ಅಂದಮೇಲೆ ಅವಿನಾಶಿಯಲ್ಲವೆ. ತಾವು ಪುರುಷಾರ್ಥಿ ಎಂದು ಹೇಳುತ್ತೀರಿ ಆದರೆ ಪುರುಷಾರ್ಥ ಮತ್ತು ಪ್ರತ್ಯಕ್ಷಪ್ರಾಲಬ್ಧ- ಇದೇ ಪರಮಾತ್ಮನ ಪ್ರಾಪ್ತಿಯ ವಿಶೇಷತೆಯಾಗಿದೆ. ಸಂಗಮಯುಗ ಪುರುಷಾರ್ಥಿ ಜೀವನವಾಗಿದೆ ಮತ್ತು ಸತ್ಯಯುಗ ಪ್ರಾಲಬ್ಧದ ಜೀವನವಾಗಿದೆ ಎನ್ನುವಂತಲ್ಲ. ಆದರೆ ಸಂಗಮಯುಗದ ವಿಶೇಷತೆಯಾಗಿದೆ, ಒಂದು ಹೆಜ್ಜೆಯನ್ನಿಡಿ ಮತ್ತು ಸಾವಿರಹೆಜ್ಜೆಯಷ್ಟು ಪ್ರಾಲಬ್ದದಲ್ಲಿ ಪಡೆಯಿರಿ. ಮತ್ತಾವುದೇ ಯುಗದಲ್ಲಿಯೂ ಒಂದಕ್ಕೆ ಪದಮಪಟ್ಟು ಸಿಗುವ ಭಾಗ್ಯವೇ ಇಲ್ಲ. ಈ ಭಾಗ್ಯದ ಗೆರೆಯನ್ನು ಸ್ವಯಂ ಭಾಗ್ಯವಿದಾತ ತಂದೆಯೇ ಈಗ ಬ್ರಹ್ಮಾತಂದೆಯ ಮೂಲಕ ಎಳೆಯುತ್ತಿದ್ದಾರೆ. ಆದ್ದರಿಂದ ಬ್ರಹ್ಮಾರವರನ್ನು 'ಭಾಗ್ಯವಿದಾತ' ಎಂದು ಹೇಳುತ್ತಾರೆ. ಗಾಯನವೂ ಇದೆ- ಯಾವಾಗ ಬ್ರಹ್ಮಾ ಭಾಗ್ಯವನ್ನು ಹಂಚಿದ್ದರೋ, ಆಗ ಮಲಗಿದ್ದಿರೇನು? ಸಂಗಮಯುಗದ ವಿಶೇಷತೆಯಾಗಿದೆ- ಪುರುಷಾರ್ಥ ಮತ್ತು ಪ್ರಾಲಬ್ಧವೆರಡೂ ಜೊತೆಜೊತೆಯಲ್ಲಾಗುವುದು. ಸತ್ಯಯುಗದ ಪ್ರಾಲಬ್ಧಕ್ಕಿಂತಲೂ ವಿಶೇಷವಾಗಿ ತಂದೆಯ ಪ್ರಾಪ್ತಿಯ ಪ್ರಾಲಬ್ಧವು ಈಗ ವರ್ತಮಾನದಲ್ಲಾಗಿದೆ. ಈಗಿನ ಪ್ರಾಲಬ್ಧವಾಗಿದೆ- ಪರಮಾತ್ಮನ ಜೊತೆಯಲ್ಲಿ ಡೈರೆಕ್ಟ್ ಸರ್ವಸಂಬಂಧದಲ್ಲಿರುವುದು. ಭವಿಷ್ಯ ಪ್ರಾಲಬ್ಧವಾಗಿದೆ- ದೇವಾತ್ಮರೊಂದಿಗೆ ಸಂಬಂಧವಿರುತ್ತದೆ. ಈಗಿನ ಪ್ರಾಪ್ತಿ ಮತ್ತು ಭವಿಷ್ಯದ ಪ್ರಾಪ್ತಿಯ ಅಂತರವಂತು ತಿಳಿದುಕೊಂಡೇ ಇರುತ್ತೀರಿ ಮತ್ತು ತಿಳಿಸಿಯೂ ಇದ್ದೇವೆ. ಅಂದಮೇಲೆ ಪುರುಷಾರ್ಥಿಯಲ್ಲ ಆದರೆ ಶ್ರೇಷ್ಠಪ್ರಾಲಧ್ದಿಯಾಗಿದ್ದೇವೆ. ಹೀಗೆ ತಿಳಿಯುತ್ತಾ ಪ್ರತೀಹೆಜ್ಜೆಯನ್ನಿಡುತ್ತೀರಾ? ಕೇವಲ ಪುರುಷಾರ್ಥಿ ಎಂದು ಹೇಳುವುದು ಅರ್ಥಾತ್ ಹುಡುಗಾಟಿಕೆಯವರಾಗಿ ಮತ್ತು ಪ್ರಾಲಬ್ಧ ಅಥವಾ ಪ್ರಾಪ್ತಿಯಿಂದ ವಂಚಿತರಾಗಿರುವುದು. ಪ್ರಾಲಬ್ಧದ ರೂಪವನ್ನು ಸದಾ ಮುಂದಿಟ್ಟುಕೊಳ್ಳಬೇಕು. ಪ್ರಾಲಬ್ಧವನ್ನು ನೋಡುತ್ತಾ ಸಹಜವಾಗಿಯೇ ಏರುವಕಲೆಯ ಅನುಭವ ಮಾಡುತ್ತೀರಿ. ಸದಾ ಸಂಗಮಯುಗದ ವಿಶೇಷತೆಗಳ ಸ್ಮೃತಿಸ್ವರೂಪರಾದಾಗ ವಿಶೇಷ ಆತ್ಮರಾಗಿಬಿಡುತ್ತೀರಿ.

**ಪಡೆಯಬೇಕಾದುದನ್ನು ಪಡೆದಿದ್ದೇವೆ, ಸದಾ ಈ ಹಾಡನ್ನು ಹಾಡುತ್ತಾ ಇರಿ.**

ನಡೆಯುತ್ತಾ-ನಡೆಯುತ್ತಾ ಕೆಲವು ಮಕ್ಕಳಿಗೆ ಮಾರ್ಗವು ಕಷ್ಟವೆನ್ನುವ ಅನುಭವವಾಗುತ್ತದೆ. ಕೆಲವೊಮ್ಮೆ ಸಹಜವೆಂದು ತಿಳಿಯುತ್ತಾರೆ, ಕೆಲವೊಮ್ಮೆ ಕಷ್ಟವೆಂದು ತಿಳಿಯುತ್ತಾರೆ. ಕೆಲವೊಮ್ಮೆ ಖುಷಿಯಲ್ಲಿ ನರ್ತಿಸುತ್ತಾರೆ, ಕೆಲವೊಮ್ಮೆ ಹೃದಯವಿಧೀರ್ಣರಾಗುತ್ತಾ ಕುಳಿತುಬಿಡುತ್ತಾರೆ. ಕೆಲವೊಮ್ಮೆ ತಂದೆಯ ಗುಣಗಾಯನ ಮಾಡುತ್ತಾರೆ ಮತ್ತು ಕೆಲವೊಮ್ಮೆ 'ಏಕೆ' ಮತ್ತು 'ಹೇಗೆ' ಎನ್ನುವ ಗುಣಗಾಯನ ಮಾಡುತ್ತೀರಿ. ಕೆಲವೊಮ್ಮೆ ಶುದ್ಧಸಂಕಲ್ಪಗಳ ಸರ್ವಖಜಾನೆಗಳ ಪ್ರಾಪ್ತಿಯ ಮಾಲೆಯನ್ನು ಸ್ಮರಣೆ

ಮಾಡಿದರೆ, ಕೆಲವೊಮ್ಮೆ ವ್ಯರ್ಥಸಂಕಲ್ಪಗಳ ಬಿರುಗಾಳಿಗೆ ವಶರಾಗಿ 'ಕಷ್ಟವಾಗಿದೆ', 'ಕಷ್ಟವಿದೆ' ಎಂಬ ಮಾಲೆಯನ್ನು ಸ್ಮರಣೆ ಮಾಡುತ್ತಾರೆ. ಇದರ ಕಾರಣವೇನು? ಕೇವಲ ಪುರುಷಾರ್ಥ ಎಂದು ತಿಳಿಯುವುದು, ಪ್ರಾಲಬ್ಧವನ್ನು ಮರೆತುಬಿಡುವುದು. ಯಾವಾಗ ಬಿಡುವ ವಸ್ತುವನ್ನು ಹಿಂದಿಡಲಾಗುತ್ತದೆ, ತೆಗೆದುಕೊಳ್ಳುವ ವಸ್ತುವನ್ನು ಮುಂದೆ ಇಡಲಾಗುತ್ತದೆ. ಅಂದರೆ ಏನನ್ನು ಬಿಡಬೇಕಾಗಿದೆಯೋ ಅದನ್ನು ಮುಂದಿಟ್ಟುಕೊಳ್ಳುತ್ತಾರೆ ಮತ್ತು ಪಡೆಯಬೇಕಾದುದನ್ನು ಹಿಂದಿಡುತ್ತಾರೆ. ಯಾವಾಗ ಬಿಡಬೇಕಾದುದ್ದನ್ನು ಹಿಂದೆ, ಪಡೆಯಬೇಕಾದದ್ದನ್ನು ಮುಂದೆ ಇಟ್ಟುಕೊಳ್ಳುತ್ತೀರೋ ಆಗ ಬಿಡಲು ಎಂದೂ ಹಿಂದೆ ಬೀಳಲಾರರಿರಿ. ಸದಾ ಮುಂದೇ ಇರುತ್ತೀರಿ. ತೆಗೆದುಕೊಳ್ಳಬೇಕು ಎಂಬುದನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುವುದು ಅರ್ಥಾತ್ ತಂದೆಯ ಸನ್ಮುಖದಲ್ಲಿರುವುದಾಗಿದೆ. ಬಿಡಬೇಕಾದವುಗಳ ಗುಣಗಾಯನ ಹೆಚ್ಚಾಗಿ ಮಾಡುತ್ತೀರಿ, ಪ್ರಾಪ್ತಿಯ ಅಥವಾ ಪ್ರಾಲಬ್ಧದ ಬಗ್ಗೆ ಕಡಿಮೆ ಯೋಚಿಸುತ್ತೀರಿ. ಆದ್ದರಿಂದ ವ್ಯರ್ಥದ ಕಡೆ ಭಾರವು ಹೆಚ್ಚಾಗುತ್ತದೆ. ಶುದ್ಧಸಂಕಲ್ಪಗಳ ಭಾರವು ಹಗುರವಾಗಿಬಿಡುತ್ತದೆ. ಅದರಿಂದ ಏರುವಕಲೆಗೆ ಬದಲಾಗಿ ಹೊರೆಯು ತಾನಾಗಿಯೇ ಕೆಳಗೆ ತಂದುಬಿಡುತ್ತದೆ ಅರ್ಥಾತ್ ಮರೆತುಹೋಗುತ್ತೀರಿ. ಈ ಒಂದು ಗೀತೆಯನ್ನು ಮರೆಯುವುದರಿಂದ ಅನೇಕ ಪ್ರಕಾರದ ಪೆಟ್ಟುಗಳನ್ನು ಅನುಭವಿಸುತ್ತೀರಿ. ಗೀತೆಯನ್ನು ಹಾಡುತ್ತಿದ್ದರೆ ಗುಟುಕರಿಸುವುದೂ(ಗುಟಕು ನುಂಗುವುದು) ಸಮಾಪ್ತಿಯಾಗುತ್ತದೆ. ತೂಕಡಿಸುವುದೂ ಸಮಾಪ್ತಿ ಆಗಿಬಿಡುತ್ತದೆ. ಹೇಗೆ ಸ್ಥೂಲಗೀತೆಯೂ ಸಹ ತಮ್ಮನ್ನು ಜಾಗೃತಗೊಳಿಸುತ್ತದೆಯಲ್ಲವೆ. ಈ ಅವಿನಾಶಿ ಗೀತೆಯನ್ನು ಹಾಡುತ್ತಾ ಇರಬೇಕು- **"ಏನನ್ನು ಪಡೆಯಬೇಕಿತ್ತು ಪಡೆದುಬಿಟ್ಟೆನು"** ಮತ್ತು ಪ್ರಾಪ್ತಿಯ ಖುಷಿಯಲ್ಲಿ ನರ್ತಿಸುತ್ತಿರಬೇಕಾಗಿದೆ. ಗೀತೆಯನ್ನು ಹಾಡುತ್ತಾ ನರ್ತಿಸುತ್ತಾ ಇದ್ದಾಗ ಗುಟುಕರಿಸುವುದು ಮತ್ತು ತೂಕಡಿಸುವುದೆಲ್ಲವೂ ಸಮಾಪ್ತಿಯಾಗಿಬಿಡುತ್ತದೆ. ಈ ರೀತಿ ಡಬಲ್ ಪ್ರತ್ಯಕ್ಷಪ್ರಮಾಣದ (ಪ್ರೂಫ್) ಮೂಲಕ ತಂದೆಯನ್ನು ಪ್ರತ್ಯಕ್ಷಗೊಳಿಸುತ್ತೀರಿ. ಇದು ಪ್ರತ್ಯಕ್ಷಗೊಳಿಸುವ ವಿಧಿಯಾಗಿದೆ. ನಡೆಯುತ್ತಾ-ತಿರುಗಾಡುತ್ತಾ ಪ್ರತ್ಯಕ್ಷಪ್ರಮಾಣವೆಂಬ ಚೈತನ್ಯ ಸಂಗ್ರಹಾಲಯದ ರೂಪವಾಗಿಬಿಡಬೇಕು ಮತ್ತು ನಡೆಯುತ್ತಾ-ತಿರುಗಾಡುತ್ತಾ ಪ್ರೊಜೆಕ್ಟರ್ ಆಗಿಬಿಡಬೇಕಾಗಿದೆ. ಚರಿತ್ರೆ ನಿರ್ಮಾಣದ ಪ್ರದರ್ಶನಿಯಾಗಿಬಿಟ್ಟರೆ ಎಲ್ಲಾ ಜಾಗಗಳಲ್ಲಿ ಪ್ರದರ್ಶನಿ ಮತ್ತು ಮ್ಯೂಜಿಯಂ ಆಗಿಬಿಡುತ್ತದೆ. ಕಡಿಮೆ ಖರ್ಚು ಮತ್ತು ಸೇವೆಯು ಹೆಚ್ಚಿನದಾಗಿಬಿಡುತ್ತದೆ. ಸ್ವಯಂ ತಾವೇ ಪ್ರದರ್ಶನಿಯಾಗಿ, ಸ್ವಯಂ ತಾವೇ ಮಾರ್ಗದರ್ಶಿಯಾಗಿರಿ. ವರ್ತಮಾನದಲ್ಲಿ ನಡೆಯುತ್ತಾ-ತಿರುಗಾಡುತ್ತಾ ಲೈಬ್ರರಿ, ಪ್ರದರ್ಶನಿಯನ್ನು ಮಾಡುತ್ತಾರಲ್ಲವೆ. ಅಂದಮೇಲೆ 60 ಸಾವಿರ ಬ್ರಾಹ್ಮಣರು ನಡೆಯುತ್ತಾ ತಿರುಗಾಡುತ್ತಾ 60 ಸಾವಿರ ಪ್ರದರ್ಶನಿಯ ಮ್ಯೂಜಿಯಂ ಆಗಿಬಿಟ್ಟರೆ ಎಷ್ಟೊಂದು ಪ್ರತ್ಯಕ್ಷತೆಯಾಗುತ್ತದೆ. ತಿಳಿಯಿತೆ! ಈ ವರ್ಷದಲ್ಲಿ 60 ಸಾವಿರ ಮೂವಿಂಗ್ ಪ್ರದರ್ಶನಿಗಳು ಮತ್ತು ಪ್ರೊಜೆಕ್ಟರ್ ಇಡೀವಿಶ್ವದಲ್ಲಿ ನಾಲ್ಕೂಕಡೆಯಲ್ಲಿ ಹರಡಿಬಿಟ್ಟರೆ, ಉಳಿತಾಯದ ಜಾಹಿರಾತಾಗಿಬಿಡುತ್ತದೆ. ಖರ್ಚನ್ನು ಮಾಡಬೇಕಾಗುವುದಿಲ್ಲ ಆದರೆ ಖರ್ಚು ಕೊಡುವವರು ಬಂದುಬಿಡುತ್ತಾರೆ. ಖರ್ಚಿಗೆ ಬದಲಾಗಿ ಬಹುಮಾನವು ಸಿಗುತ್ತದೆ.

ಗುಜರಾತಂತು ದೊಡ್ಡದಿದೆಯಲ್ಲವೆ. ಸಂಖ್ಯೆಯಲ್ಲಂತು ದೊಡ್ಡದೇ ಇದೆ. ಈಗ ಸಾಕ್ಷಾತ್ ರೂಪದಲ್ಲಿಯೂ ದೊಡ್ಡ(ಶ್ರೇಷ್ಠ)ವರಾಗಿ ತೋರಿಸಬೇಕಾಗಿದೆ. ಗುಜರಾತಿನ ಧರಣಿಯು ಚೆನ್ನಾಗಿದೆ. ಎಲ್ಲಿ ಧರಣಿಯು ಚೆನ್ನಾಗಿರುತ್ತದೆಯೋ ಅಲ್ಲಿ ಶಕ್ತಿಶಾಲಿ ಬೀಜವನ್ನು ಬಿತ್ತಲಾಗುತ್ತದೆ. ಶಕ್ತಿಶಾಲಿ ಬೀಜವಾಗಿದೆ- ವಾರಸುದಾರ ಕ್ವಾಲಿಟಿಯ ಬೀಜ. ಇಂತಹ ವಾರಸುದಾರರಲ್ಲಿ ಬೀಜವನ್ನು ಬಿತ್ತನೆ ಮಾಡಿ ಫಲವನ್ನು ತೆಗೆಯಬೇಕು. ಫಲೀಭೂತ ಧರಣಿಯೆಂದರೆ ಎಲ್ಲದಕ್ಕಿಂತ ಶ್ರೇಷ್ಠಫಲವನ್ನು ಕೊಡುವುದಾಗಿದೆ. ಕ್ವಾಂಟಿಟಿಯಂತು ಬಹಳಚೆನ್ನಾಗಿದೆ. ಕ್ವಾಲಿಟಿಯೂ ಇದೆ ಆದರೆ ಇನ್ನೂ ತೆಗೆಯಬೇಕು. ಕ್ವಾಲಿಟಿಯಿರುವ ಒಬ್ಬೊಬ್ಬರೂ ವಾರಸುದಾರ ಗ್ರೂಪ್‌ನ ಪ್ರಮಾಣವನ್ನು ಕೊಡಬೇಕಾಗಿದೆ. ಗುಜರಾತಿನಲ್ಲಿ ಸಹಜವಾಗಿಯೇ ತೆಗೆಯಬಹುದು. ಈಗ ವಿಸ್ತಾರವು ಹೆಚ್ಚಾಗಿ ಆಗುತ್ತಿದೆ ಆದ್ದರಿಂದ ವಾರಸುಧಾರರು ಗುಪ್ತವಾಗಿಬಿಟ್ಟರು. ಈಗ ಅವರನ್ನು ಪ್ರತ್ಯಕ್ಷ ಮಾಡಿರಿ. ಗುಜರಾತ್‌ನವರು ಏನು ಮಾಡಬೇಕೋ- ತಿಳಿಯಿತೆ! ಅನ್ಯರು ಸಂಪರ್ಕದಲ್ಲಿ ತಂದರು, ತಾವು ಸಂಬಂಧದಲ್ಲಿ ತರುತ್ತೀರೆಂದರೆ ನಂಬರ್‌ವನ್ ಆಗಿಬಿಡುತ್ತೀರಿ. ಈ ವರ್ಷದ ಯೋಜನೆಯನ್ನೂ ತಿಳಿಸಿದ್ದೇವೆ. ಈಗ ವಿಸ್ತಾರದಲ್ಲಿ ನಿರತರಾಗಿಬಿಟ್ಟಿದ್ದೀರಿ. ಹೇಗೆ ವಿಭಿನ್ನ ವೃಕ್ಷಗಳು ವೃದ್ಧಿಯಾಗುತ್ತದೆಯೋ ಆಗ

ಬೀಜವು ಗುಪ್ತವಾಗಿಬಿಡುತ್ತದೆ ಮತ್ತು ಆನಂತರ ಅಂತ್ಯದಲ್ಲಿ ಬೀಜವೇ ಹೊರಬರುತ್ತದೆ. ವಿಸ್ತಾರದಲ್ಲಿ ಹೆಚ್ಚು ವ್ಯಸ್ತರಾಗಿಬಿಟ್ಟಿದ್ದೀರಿ. ಈಗ ಪುನಃ ಬೀಜ ಅರ್ಥಾತ್ ವಾರಸುದಾರ ಕ್ವಾಲಿಟಿಯನ್ನು ಹೊರತೆಗೆಯಬೇಕಾಗಿದೆ. ಆದಿಯಲ್ಲಿ ಏನು ಮಾಡಿದ್ದಿರಿ ಅದನ್ನೇ ಅಂತ್ಯದಲ್ಲಿಯೂ ಮಾಡಿರಿ.

**ಸದಾ ಖುಷಿಯಲ್ಲಿ ನರ್ತಿಸುವ, ಪ್ರಾಪ್ತಿಯ ಗೀತೆಯನ್ನು ಹಾಡುವ, ಪ್ರತ್ಯಕ್ಷಫಲವನ್ನು ಅನುಭವ ಮಾಡುವ, ತಮ್ಮನ್ನು ಪ್ರತ್ಯಕ್ಷಪ್ರಮಾಣವನ್ನಾಗಿ ಮಾಡಿಕೊಂಡು ತಂದೆಯನ್ನು ಪ್ರತ್ಯಕ್ಷ ಮಾಡುವ, ಇಂತಹ ಡಬಲ್ ಗ್ಲೋಫ್ ಶ್ರೇಷ್ಠಾತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಮಹಾದಾನಿ ಅರ್ಥಾತ್ ಸದಾ ಅಖಂಡವಾಗಿ ಹೆಜ್ಜೆ ಮುಂದಿಡುವುದು. ಪಾರ್ಟಿಯೊಂದಿಗೆ:-**

1. ಈ ಬ್ರಾಹ್ಮಣಜೀವನದ ಲಕ್ಷ್ಯವೇ ಆಗಿದೆ - ನರನಿಂದ ಶ್ರೀನಾರಾಯಣನಾಗುವುದು ಹಾಗೂ ಶ್ರೀಲಕ್ಷ್ಮಿಯಾಗುವುದು. ಅಂದಾಗ ಸದಾ ಗುಣಮೂರ್ತಿ ದೇವತಾ ಸ್ವರೂಪದ ಸ್ಮೃತಿಯಲ್ಲಿ ಇರುವವರಾಗಿದ್ದೀರಿ. ತಮ್ಮ ಲಕ್ಷ್ಯವನ್ನೆಂದಿಗೂ ಮರೆಯಬಾರದು. ಸದಾ ತಮ್ಮ ದಿವ್ಯಗುಣಮೂರ್ತಿಯ ಸ್ಮೃತಿಸ್ವರೂಪರಂತೆ ಇರುತ್ತೀರಾ? ಲಕ್ಷ್ಮೀ ಸ್ವರೂಪ ಅರ್ಥಾತ್ ಧನದೇವಿ ಮತ್ತು ನಾರಾಯಣನ ಸ್ವರೂಪ ಅರ್ಥಾತ್ ರಾಜ್ಯ- ಅಧಿಕಾರಿ. ಲಕ್ಷ್ಮಿಯನ್ನು ಧನದೇವಿ ಎಂದು ಹೇಳುತ್ತಾರೆ, ಆ ಧನವಲ್ಲ ಆದರೆ ಜ್ಞಾನದ ಖಜಾನೆಯೇನು ಸಿಕ್ಕಿದೆಯೋ, ಆ ಧನದ ದೇವಿ ಆಗಿದ್ದಾರೆ. ಎಲ್ಲರೂ ಧನದೇವಿಯರಲ್ಲವೆ. ಯಾರು ಧನದೇವಿ ಆಗುತ್ತಾರೆಯೋ ಅವರು ಸದಾ ಸರ್ವಖಜಾನೆಗಳಿಂದ ಸಂಪನ್ನ ವಾಗಿರುತ್ತಾರೆ. ಯಾವಾಗಿನಿಂದ ಬ್ರಾಹ್ಮಣರಾದಿರಿ, ಆಗಿನಿಂದ ಜನ್ಮಸಿದ್ಧ ಅಧಿಕಾರದಲ್ಲಿ ಏನು ಸಿಕ್ಕಿದೆ? ಜ್ಞಾನ, ಶಕ್ತಿಗಳ ಖಜಾನೆಯು ಸಿಕ್ಕಿದೆಯಲ್ಲವೆ. ಅಂದಮೇಲೆ ಅಧಿಕಾರವು ಜೊತೆಯಿರುತ್ತದೆ, ಬ್ಯಾಂಕಿನಲ್ಲಿ ಇರುವುದಿಲ್ಲ ಅಲ್ಲವೆ? ಬ್ಯಾಂಕಿನಲ್ಲಿ ಇಟ್ಟರೆ ಖುಷಿಯಾಗುವುದಿಲ್ಲ. ಬ್ಯಾಂಕಿನಲ್ಲಿಡುವುದು ಅರ್ಥಾತ್ ಉಪಯೋಗಿಸದೇ ಇರುವುದು, ದೂರ ಮಾಡುವುದಾಗಿದೆ. ಎಷ್ಟು ಉಪಯೋಗ ಮಾಡುತ್ತೀರಿ, ಖುಷಿಯು ಅಷ್ಟೂ ಹೆಚ್ಚುತ್ತದೆ. ಈ ಖಜಾನೆಗಳನ್ನು ಜೊತೆಯಲ್ಲಿಟ್ಟುಕೊಳ್ಳುವುದರಿಂದ ಯಾವುದೇ ಅಪಾಯವಿಲ್ಲ. ಯಾವಾಗ ಮಹಾದಾನಿ, ವರದಾನಿಯಾಗಬೇಕಾದಾಗ ಲಾಕರ್‌ನಲ್ಲಿ ಹೇಗಿಡುತ್ತೀರಿ. ಆದ್ದರಿಂದ ಪ್ರತಿನಿತ್ಯವೂ ತಮಗೆ ಸಿಕ್ಕಿರುವ ಖಜಾನೆಗಳನ್ನು ನೋಡಿರಿ ಮತ್ತು ಸ್ವಯಂಗಾಗಿ ಹಾಗೂ ಅನ್ಯರಿಗಾಗಿಯೂ ಉಪಯೋಗ ಮಾಡಿರಿ, ಮಹಾದಾನಿ ಅರ್ಥಾಥ್ ಸದಾ ಅಖಂಡವಾಗಿ ಹೆಜ್ಜೆಯು ಮುಂದಿಡುತ್ತಿರುವುದು. ಒಂದುದಿನ ಮಾಡಿದಿರಿ ಮತ್ತು ಒಂದುತಿಂಗಳಿನ ನಂತರ ಮಾಡಿದಿರೆಂದರೆ ಮಹಾದಾನಿಯೆಂದು ಹೇಳುವುದಿಲ್ಲ. ಮಹಾದಾನಿ ಅರ್ಥಾತ್ ಸದಾ `ಭಂಡಾರವು ನಡೆಯುತ್ತಿರುವುದು, ಸದಾ ಸಂಪನ್ನವಾಗಿರುವುದು. ಹೇಗೆ ತಂದೆಯ ಭಂಡಾರವು ಸದಾ ನಡೆಯುತ್ತಿರುತ್ತದೆಯಲ್ಲವೆ. ಪ್ರತಿನಿತ್ಯವೂ ಕೊಡುತ್ತಿರುತ್ತಾರೆ ಅಂದಮೇಲೆ ಮಕ್ಕಳ ಕಾರ್ಯವೂ ಸಹ ಪ್ರತಿನಿತ್ಯವೂ ಕೊಡುವುದಾಗಿದೆ. ಈ ಭಂಡಾರವು ತೆರೆದಿರುವುದಾಗಿರುತ್ತದೆ ಆದ್ದರಿಂದ ಕಳ್ಳರು ಬರುವುದಿಲ್ಲ. ಬಂದ್ ಮಾಡಿಟ್ಟರೆ ಕಳ್ಳರು ಬಂದುಬಿಡುತ್ತಾರೆ. ಅದೇರೀತಿ ಎಷ್ಟು ಹೆಚ್ಚಿನದಾಗಿ ಬೀಗವನ್ನಾಕುತ್ತೇವೆಯೋ, ಅಷ್ಟೂ ಹೆಚ್ಚಾಗಿ ಕಳ್ಳರಾಗಿಬಿಡುತ್ತಾರೆ. ಮೊದಲು ತೆರೆದ ಖಜಾನೆಯಿತ್ತು ಆದ್ದರಿಂದ ಇಷ್ಟೊಂದು ಕಳ್ಳರಿರಲಿಲ್ಲ, ಅಂದಮೇಲೆ ಸದಾ ಭಂಡಾರವು ತೆರೆದಿಟ್ಟಿರಬೇಕು. ಈಗಿನವರೆಗೂ ಏನಾಯಿತು ಅದಕ್ಕೆ ಪೂರ್ಣವಿರಾಮವನ್ನಾಕಿ. ಕಳೆದು ಹೋಗಿರುವುದನ್ನು ಚಿಂತನೆಯಲ್ಲಿ ತರಬಾರದು, ಇವರಿಗೆ ತೀವ್ರಪುರುಷಾರ್ಥಿ ಎಂದು ಹೇಳಲಾಗುತ್ತದೆ. ಒಂದುವೇಳೆ ಕಳೆದುಹೋಗಿರುವುದನ್ನು ಚಿಂತೆ ಮಾಡುತ್ತೀರೆಂದರೆ ಸಮಯ, ಶಕ್ತಿ, ಸಂಕಲ್ಪವೆಲ್ಲವೂ ವ್ಯರ್ಥವಾಗಿಬಿಡುತ್ತದೆ ಈಗ ವ್ಯರ್ಥ ಮಾಡುವ ಸಮಯವಲ್ಲ. ಸಂಗಮಯುಗದ ಎರಡು ಗಳಿಗೆ ಅರ್ಥಾತ್ ಎರಡು ಸೆಕೆಂಡ್ ಸಹ ವ್ಯರ್ಥವಾಯಿತೆಂದರೆ ಅನೇಕವರ್ಷಗಳು ವ್ಯರ್ಥ ಮಾಡಿಬಿಟ್ಟಿರಿ. ಸಂಗಮಯುಗದ ಮೌಲ್ಯವನ್ನು ತಿಳಿದಿದ್ದೀರಲ್ಲವೆ! ಸಂಗಮಯುಗದ ಒಂದು ಸೆಕೆಂಡ್ ಸಹ ಎಷ್ಟು ವರ್ಷಗಳಿಗೆ ಸಮಾನವಾಯಿತು? ಆದ್ದರಿಂದ ಒಂದುಸೆಕೆಂಡ್ ಕಳೆಯಲಿಲ್ಲ ಆದರೆ ಅನೇಕ ವರ್ಷಗಳನ್ನೇ

ಕಳೆದುಬಿಟ್ಟಿರಿ. ಆದ್ದರಿಂದಲೇ ಈಗ ಪೂರ್ಣ ವಿರಾಮವನ್ನು ಹಾಕಬೇಕು. ಯಾರು ಪೂರ್ಣವಿರಾಮವನ್ನು ಹಾಕುವುದು ತಿಳಿದಿದ್ದಾರೆಯೋ ಅವರು ಸದಾ ಫುಲ್ (ಸಂಪೂರ್ಣ) ಆಗಿರುತ್ತಾರೆ.

2. ಸದಾ ತಮ್ಮ ಶುಭಭಾವನೆಯಿಂದ ವೃದ್ಧಿ ಮಾಡುತ್ತಿರುತ್ತೀರಾ? ಎಂತಹ ಆತ್ಮರೇ ಆಗಿರಲಿ ಆದರೆ ಸದಾ ಪ್ರತಿಯೊಂದು ಆತ್ಮನ ಬಗ್ಗೆ ಶುಭಭಾವನೆಯನ್ನಿಡಿ, ಶುಭಭಾವನೆಯು ಸಫಲತೆಯನ್ನು ಪ್ರಾಪ್ತಿ ಮಾಡಿಸುತ್ತದೆ. ಶುಭಭಾವನೆಯಿಂದ ಸೇವೆ ಮಾಡುವ ಅನುಭವವಿದೆಯೇ? ಶುಭಭಾವನೆ ಅರ್ಥಾತ್ ದಯಾಹೃದಯ, ಹೇಗೆ ತಂದೆಯವರು ಅಪಕಾರಿಗಳ ಮೇಲೆ ಉಪಕಾರಿಯಾಗಿದ್ದಾರೆಯೋ, ಹಾಗೆಯೇ ತಮ್ಮ ಮುಂದೆ ಎಂತಹ ಆತ್ಮವೇ ಇರಬಹುದು ಆದರೆ ತಮ್ಮ ದಯಾವೃತ್ತಿಯಿಂದ, ಶುಭಭಾವನೆಯಿಂದ ಪರಿವರ್ತನೆ ಮಾಡಿಬಿಡಿ. ಯಾವಾಗ ವಿಜ್ಞಾನಿಗಳು ಬಂಜರು ಭೂಮಿಯಲ್ಲಿ ಪಸಲನ್ನು ತರಲು ಸಾಧ್ಯವಿದೆಯೆಂದಾಗ, ಶಾಂತಿಯಲ್ಲಿರುವವರು ಧರಣಿಯ ಪರಿವರ್ತನೆ ಮಾಡಲು ಸಾಧ್ಯವಿಲ್ಲವೆ! ಸಂಕಲ್ಪವೂ ಸಹ ಸೃಷ್ಟಿಯನ್ನು ರಚನೆ ಮಾಡಿಬಿಡುತ್ತದೆ ಆದ್ದರಿಂದ ಸದಾ ಧರಣಿಯನ್ನು ಪರಿವರ್ತನೆ ಮಾಡುವ ಶುಭಭಾವನೆಯನ್ನಿಡಿ. ತಮ್ಮ ಏರುವಕಲೆಯ ಪ್ರಕಂಪನಗಳ ಮೂಲಕ ಧರಣಿಯ ಪರಿವರ್ತನೆಯನ್ನು ಮಾಡುತ್ತಾ ನಡೆಯಿರಿ. ಸ್ವಪರಿವರ್ತನೆಯಿಂದ ಧರಣಿಯ ಪರಿವರ್ತನೆಯಾಗಿ ಬಿಡುತ್ತದೆ. ಧರಣಿಯಲ್ಲಿ ನೇಗಿಲನ್ನು ಹೂಡುವವರಲ್ಲವೆ. ಸುಸ್ತಾಗುವವರಂತು ಅಲ್ಲ ಅಲ್ಲವೆ? ನೇಗಿಲೂಡುವವರು ಬಹಳ ಚೆನ್ನಾಗಿ ಅವಿಶ್ರಾಂತರಾಗಿರುತ್ತಾರೆ, ಬಂಜರು ಭೂಮಿಯನ್ನೂ ಹಚ್ಚಹಸಿರನ್ನಾಗಿ ಮಾಡಿಬಿಡುತ್ತಾರೆ. ಈಗ ಹೃದಯ ವಿಧೀರ್ಣರಾಗಬಾರದು, ದಿಲ್ ಖುಷ್ ಆಗಿರಬೇಕು ಅಂದಮೇಲೆ ತಮ್ಮ ಖುಷಿಯು ಎಲ್ಲರನ್ನೂ ಸ್ವತಹವಾಗಿಯೇ ಆಕರ್ಷಣೆ ಮಾಡುತ್ತದೆ.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 21-01-1980.

***ತಂದೆಯನ್ನು ಪ್ರತ್ಯಕ್ಷ ಮಾಡುವ ವಿಧಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಮಾಯಾ ಪ್ರೂಫ್, ಈಶ್ವರೀಯ ಜೀವನದ ಪ್ರೂಫ್ ಅರ್ಥಾಥ್ ಡಬಲ್ ಪ್ರೂಫ್ ಆಗಿದ್ದೇನೆ.

2. ನಾನು ಪ್ರವೃತ್ತಿಯಲ್ಲಿ ಇರುತ್ತಲೂ ದೇಹ ಮತ್ತು ದೇಹ ಪ್ರಪಂಚದ ಸಂಬಂಧಗಳಿಗೆ ಅತೀತವಾಗಿ ಹಳೆಯ ವೃತ್ತಿಗೆ ಪರ-ವಾಗಿ ಅರ್ಥಾಥ್ ಪರ-ವೃತ್ತಿಯಲ್ಲಿ ಇದ್ದೇನೆ.

3. ನಾನು ಸಂಪೂರ್ಣ ಪವಿತ್ರತೆಯ ಜೀವನದಲ್ಲಿ ಇರುತ್ತಾ, ವಾರಸತ್ವದ ಅವಿನಾಶೀ ಪ್ರಾಪ್ತಿಯನ್ನು ಪಡೆದು ಪರಮಾತ್ಮನ ಜ್ಞಾನಕ್ಕೆ ಪ್ರಮಾಣವಾಗಿ ತಯಾರಾಗಿದ್ದೇನೆ.

4. ನಾನು ಪ್ರಾಲಬ್ಧವನ್ನು ಎದುರಿಗಿಟ್ಟುಕೊಂಡು ಸಹಜವಾಗಿ ಹಾರುವ ಕಲೆಯ ಅನುಭವವನ್ನು ಮಾಡಿಕೊಂಡಿದ್ದೇನೆ.

5. ನಾನು ಸದಾ ಸಂಗಮಯುಗದ ವಿಶೇಷತೆಗಳ ಸ್ಮೃತಿ ಸ್ವರೂಪವಾಗಿರುವ ವಿಶೇಷ ಆತ್ಮ.

6. ನಾನು ಶುದ್ಧ ಸಂಕಲ್ಪಗಳ ಸರ್ವ ಖಜಾನೆಗಳ ಪ್ರಾಪ್ತಿಯ ಮಾಲೆಯನ್ನು ಸ್ಮರಣೆ ಮಾಡುತ್ತಿದ್ದೇನೆ.

7. ನಾನು "ಪಡೆಯಬೇಕಾಗಿದ್ದನ್ನು ಪಡೆದಿದ್ದೇನೆ" ಈ ಅವಿನಾಶಿ ಹಾಡನ್ನು ಹಾಡುತ್ತಾ, ಪ್ರಾಪ್ತಿಯ ಸಂತೋಷದಲ್ಲಿ ನರ್ತನೆ ಮಾಡುತ್ತಿದ್ದೇನೆ.

8. ನಾನು ನಡೆದಾಡುವ ಮ್ಯೂಸಿಯಂ ಆಗಿ ಸಂಚಾರ ಪ್ರಾಜೆಕ್ಟರ್ ಆಗಿ ಚರಿತ್ರೆ ನಿರ್ಮಾಣದ ಪ್ರದರ್ಶನಿಯಾಗಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಸೇವೆಯನ್ನು ಮಾಡಿದ್ದೇನೆ.

9. ನಾನು ಇತರರನ್ನು ಸಂಬಂಧ ಸಂಪರ್ಕಗಳಲ್ಲಿ ತರುತ್ತಾ ನಾನು ಸಂಬಂಧದಲ್ಲಿ ಬಂದಿರುವ ಮೊದಲ ನಂಬರ್ ವಿದ್ಯಾರ್ಥಿ.